ಅಮೃತಮಹಲ್ ಇಲಾಖಾ.

ಪ್ರಸಿದ್ಧ ಪತ್ರಿಕೆ.

ತಾರೀಖು 6—7ನೆ ಸೆಪ್ಟೆಂಬರ್ 1907, ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ — ಮೈಸೂರು ಸೀಮೆಯ ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳು ಮೈಸೂರಿನಲ್ಲಿ ನಾಳೆ ದಸರಾ ಸಂಬಂಧವಾಗಿ ನಡಿಯುವ ವಸ್ತು ಪ್ರದರ್ಶನ ಶಾಲೆಯ ಕಟ್ಟಡದ ಬಳಿ ಬರುವ 1907ನೆ ಅಕ್ಟೋಬರ್ ಮಾಹೆ 14ನೆ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಹರಾಜಿನಲ್ಲಿ ಪಡಿಯಬಹುದು.

ಷರತ್ತುಗಳು :—

(i) ಹರಾಜು ಖೈದಾದ ಕೂಡ್ಲೆ ಪೂರಾ ಮೊಬಲಗು ಪಾವತಿ ಮಾಡಬೇಕು.

(ii) ಹರಾಜಿನಲ್ಲಿ ಪಡೆದ ಎತ್ತನ್ನೂ ವಸ್ತು ಪ್ರದರ್ಶನ ಆಕ್ಕೆರು ಆದನಂತರ ಹರಾಜುದಾರನ ಸುಪರ್ದು ಮಾಡಲ್ಪಡುತ್ತೆ.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟೆಂಡೆಂಟ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರನರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8

ಚಪ್ ಮಾಹೇ ಯಾ ಕ್ವಾರ್ಟರಿಗೆ

ದಾವಮಾಷಾಯಿ ಪ್ರಕಾರ ದರಗಳು.

	ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಸ್ ಯಾ ಆಕ್ಟ್ಯಗಳು ಯಾವದೂ ಇಲ್ಲದಿದ್ದರೆ.	0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮತ್ತು ಂ 1955ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲೆ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲೆ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲೆ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬವಾಗಿ ಆಯಾ ತಾಲ್ಲೂಕಾ ಅಮಲ್ದಾರರಿಂದ ಹಿಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮತ್ತು ಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರ್ಡರಿ ಅನುಸರಿಸಿ ನೋಳ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇರ್ಸ್ ಅನುಸರಿಸಿ ಸರ್ಟಿಫಿಕೇಟ್

ಬಗ್ಯೆ ನೋಟಿಸುಗಳು :—	ರೂ. ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ ..	1 4

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 317ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2 8

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ ಪುಟ 1ಕ್ಕೆ ..	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,, ..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಟ್ಟಿ 1ಕ್ಕೆ ..	0 8
ಎರಡನೇ ದಫಾ	ಡಿಟೋ ಡಿಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0 4

ಸರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಭಾರ್ಜ್ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ್ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಅಫೀಸು ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ಹಿನಾಪಸು ಮಾಡಲ್ಪಡುತ್ತೆ.

ಸರ್ಕಾರಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಖಾತೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಭಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ವ ಇಸ್ತಿಹಾರನಾಮಗಳೂ ಆ ಗೆಜೆಟ್ ಭಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾತಲಪ್ಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಭಾಪಿಸಲ್ಪಡುತ್ತೆಂಬ ಖಾತರಿ ಇಲ್ಲ.

ಸಿ. ಹೆಚ್. ಏಪ್ಪ,
ಕಂಪೈಲರ್, ಮೈಸೂರ ಗೆಜೆಟ್.